# ಪರ್ಫೆಕ್ಷನಿಸ್ಟ್ ಜಾಕಿರ್




-ಕಲಾ ರಾಮನಾಥ್
ಪಿಟೀಲು ವಾದಕಿ

'ಐ ಕನ್ಸಿಡರ್ ಜಾಕಿರ್ ಭಾಯ್ ಈಸ್ ಏಂಜೆಲ್ ಇನ್ ಮೈ ಲೈಫ್...' ಕಳೆದ 45 ವರ್ಷಗಳಿಂದಲೂ ನನ್ನ–ಜಾಕಿರ್ ನಡುವೆ ಬಾಂಧವ್ಯ, ಒಡನಾಟವಿದ್ದು, ಅವರು ನನಗೆ ಹಿರಿಯಣ್ಣನಿದ್ದಂತೆ. ಅವರು ನನ್ನ ಸಂಗೀತ ಮಾರ್ಗದರ್ಶಕ. ನಾವಿಬ್ಬರು ದೇಶ ವಿದೇಶಗಳಲ್ಲಿ ಸಂಗೀತ ಪ್ರವಾಸ ಮಾಡಿ ನೂರಾರು ಕಛೇರಿಗಳನ್ನು ಜೊತೆಯಾಗಿ ನೀಡಿದ್ದೇವೆ. ಅವರ ವ್ಯಕ್ತಿತ್ವದಲ್ಲಿ ಪ್ರೀತಿ, ವಾತ್ಸಲ್ಯ ಬೇಗನೆ ಸೆಳೆಯುವ ಗುಣಗಳು. ಸಂಗೀತದಲ್ಲಂತೂ ಅವರೊಬ್ಬ 'ಪರ್ಫೆಕ್ಷನಿಸ್ಟ್'.

ಸುಮಾರು ಮೂರು ತಿಂಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ನಾನು, ಜಾಕಿರ್ ಹಾಗೂ ಜಯಂತಿ ಕುಮರೇಶ್ ಕಛೇರಿ ನಡೆಸಿಕೊಟ್ಟಿದ್ದೆವು. ನಮ್ಮ ತಂಡಕ್ಕೆ ಜಾಕಿರ್ 'ತ್ರಿವೇಣಿ' ಅಂತ ಹೆಸರು ಇಟ್ಟಿದ್ರು. ಕಛೇರಿಯಲ್ಲಿ ರಾಗ ವಿಸ್ತಾರ ಮಾಡುವಾಗ ನನ್ನ ಕಡೆಯಿಂದ ಸಣ್ಣ ಒಂದು ಆಭಾಸ ಆಗಿತ್ತು. ಅದರಿಂದ ನನಗಂತೂ ಬಹಳ ಬೇಜಾರಾಯ್ತು. ಕಛೇರಿ ಮುಗಿದ ಮೇಲೆ ನನ್ನ ಹತ್ತಿರ ಬಂದು 'ನೋ ವನ್ ಈಸ್ ಪರ್ಫೆಕ್ಟ್ ಇನ್ ದ ವರ್ಲ್ಡ್' ಎನ್ನುತ್ತಾ, 'ಆದರೆ ನಾವು ತಪ್ಪಿದೆವು ಎಂಬುದು ಗೊತ್ತಿರಬೇಕು, ಮತ್ತೆ ಎಂದೂ ಆ ತಪ್ಪು ಆಗದಂತೆ ನೋಡಿಕೊಳ್ಳಬೇಕು, ಅಲ್ಲದೆ ಕೇಳುಗರಿಗೆ ಗೊತ್ತಾಗದೇ ಇರುವ ರೀತಿಯಲ್ಲಿ ನಿರ್ವಹಣೆ ಮಾಡುವುದನ್ನು ಕಲಿಯಬೇಕು' ಎಂದು ಸಲಹೆ ನೀಡಿದರು. ಇದು ಜಾಕಿರ್ ಅವರ ದೊಡ್ಡ ಗುಣ.

ಜಾಕಿರ್ ಅವರ ವಿಭಿನ್ನ ಗುಣ ಮತ್ತೊಮ್ಮೆ ಅನಾವರಣವಾದದ್ದು ಮೂರು ತಿಂಗಳ ಹಿಂದೆ ನಡೆದ ಮತ್ತೊಂದು ಘಟನೆಯಲ್ಲಿ.

ನ್ಯೂಜಿಲೆಂಡ್‌ನಲ್ಲಿ ನನ್ನ ಹಾಗೂ ಜಾಕಿರ್ ಅವರ ಜುಗಲಬಂದಿ. 300 ಜನರಷ್ಟೇ ಕುಳಿತುಕೊಳ್ಳಬಹುದಾದ ಆಡಿಟೋರಿಯಂ ಅದು. ಆ ಕಛೇರಿಯ ಒಂದು ಟಿಕೆಟ್‌ಗೆ 300 ಡಾಲರ್. ಕಛೇರಿ ಬಳಿಕ ಎಲ್ಲರೂ ಜಾಕಿರ್ ಜೊತೆಗೆ ಫೋಟೊ ಹಾಗೂ ಆಟೊಗ್ರಾಫ್ ಕೇಳಿ ಸರದಿಯಲ್ಲಿ ನಿಂತರು. ಅವರು ಸ್ವಲ್ಪವೂ ಬೇಸರಿಸಿಕೊಳ್ಳದೆ ಎಲ್ಲ ಮುನ್ನೂರು ಜನರಿಗೂ ಪ್ರತ್ಯೇಕವಾಗಿ ಆಟೊಗ್ರಾಫ್ ನೀಡಿದರು, ಫೋಟೊ ತೆಗೆಸಿಕೊಳ್ಳಲು ಸಹಕರಿಸಿದರು. ಒಬ್ಬ ವಿಶ್ವದರ್ಜೆ ಕಲಾವಿದನ ತಾಳ್ಮೆ ಹಾಗೂ ಜನರ ಮೇಲಿನ ಪ್ರೀತಿಗೆ ಇದೊಂದು ಉತ್ತಮ ಉದಾಹರಣೆ.

ಜಾಕಿರ್ ಹುಸೇನ್ ನಿಗರ್ವಿ, ಮಾನವೀಯ ಮೌಲ್ಯಗಳನ್ನು ಪ್ರೀತಿಸುವವರು; ಇತರರ ಬಗ್ಗೆ ಕಾಳಜಿ, ಪ್ರೀತಿ ತೋರಿಸುವ ವ್ಯಕ್ತಿತ್ವದವರು. ಇಂಥ ಕಲಾವಿದನ ಹಾಗೆ ಇರುವ ಇನ್ನೊಬ್ಬರನ್ನು ನನ್ನ ಜೀವಮಾನದಲ್ಲಿ ನೋಡಿಯೇ ಇಲ್ಲ. ಜಾಕಿರ್ ಭೋಜನಪ್ರಿಯರು. ವಿದೇಶದಲ್ಲಿ ಯಾವ ಹೋಟೆಲ್‌ಗೆ ಹೋದರೂ ಅಲ್ಲಿ ಸ್ಪೆಷಲ್ ಏನಿದೆ ಹಾಗೂ ಸ್ಥಳೀಯವಾಗಿ ಯಾವ ತಿಂಡಿ ಹೆಚ್ಚು ಜನಪ್ರಿಯ ಎಂಬುದನ್ನು ಆಯ್ಕೆ ಮಾಡಿ ತಿನ್ನುತ್ತಿದ್ದರು. ಸಿಹಿತಿಂಡಿಯನ್ನೂ ಇಷ್ಟಪಡುತ್ತಿದ್ದರು. ಊಟದ ಕೊನೆಗೆ ಡೆಸರ್ಟ್ ತಿನ್ನುವುದನ್ನು ರೂಢಿ ಮಾಡಿಕೊಂಡಿದ್ದರು. ಅದರಲ್ಲೂ ಒಂದು ಸ್ಪೂನ್ ಡೆಸರ್ಟ್ ತಿಂದು ಮಿಕ್ಕಿದ್ದನ್ನು ಯಾವಾಗಲೂ ನನಗೇ ಕೊಡುತ್ತಿದ್ದರು. ಆ 'ಸಿಹಿ–ಸವಿ' ನೆನಪು ಎಂದಿಗೂ ಮರೆಯಲಾರೆ.

ಜಾಕಿರ್ ನಮ್ಮ ಸಂಗೀತವನ್ನು ವಿಶ್ವಮಟ್ಟಕ್ಕೆ ಒಯ್ದು, ಪಾಶ್ಚಾತ್ಯ ದೇಶಗಳಲ್ಲಿ ಸಂಗೀತದ ಘಮಲನ್ನು ಹರಡಿ, ಅವರನ್ನೂ ನಾದಲೋಕದಲ್ಲಿ ಮುಳುಗುವಂತೆ ಮಾಡಿದ್ದರ ಫಲವೇ ಇಂದು ವಿದೇಶಗಳಲ್ಲಿ ಭಾರತೀಯ ಸಂಗೀತ ಇಷ್ಟೊಂದು ಜನಪ್ರಿಯವಾಗಲು ಕಾರಣ. ಜೊತೆಗೆ ಜಾಕಿರ್, ಪಾಶ್ಚಾತ್ಯ ಸಂಗೀತ ಜಾಸ್ ಅನ್ನೂ ಅಲ್ಲಿ ನುಡಿಸಿದ್ದರಿಂದ ನಮ್ಮ ಸಂಗೀತಗಾರರಿಗೆ ಅಲ್ಲಿ ಇಷ್ಟೊಂದು ಮನ್ನಣೆ ಸಿಗುತ್ತಿದೆ.



### ಸಂಗೀತವೇ ಎಲ್ಲ...

ಜಾಕಿರ್ ಚಿಕ್ಕ ಮಗುವಾಗಿದ್ದಾಗಿನ ಘಟನೆ. ತಂದೆ ಅಲ್ಲಾ ರಖಾ, ಮಗುವಿನ ಕಿವಿಯಲ್ಲಿ ಪ್ರಾರ್ಥನೆ ಹೇಳಬೇಕಾಗಿರುವುದು ಸಂಪ್ರದಾಯ. ಪ್ರಾರ್ಥನೆ ಬದಲು ಮಗುವಿನ ಕಿವಿಯಲ್ಲಿ ತಬಲಾ ಬೋಲ್ 'ಧಾಗೆ ತಿಟ ಧಾಗೆ ತಿಟ ಕಡ್ಡಾ ತಿಟ...' ಅಂತ ಹೇಳಿದರು. ಆಗ ಅವರ ತಾಯಿ ಬಂದು 'ಮಗುವಿಗೆ ಏನು ಬೋಧಿಸ್ತಾ ಇದ್ದೀರಾ, ಪ್ರಾರ್ಥನೆಯನ್ನು ಬೋಧಿಸಿ' ಎಂದರಂತೆ. ಆಗ ಅಲ್ಲಾ ರಖಾ ಅವರು, 'ಸಂಗೀತವೇ ನಮ್ಮ ಪ್ರಾರ್ಥನೆ, ಸಂಗೀತ ಎಂದರೆ ವಿದ್ಯೆ, ಅದೇ ನಮ್ಮ ಶಕ್ತಿ, ನಾನು ನನ್ನ ಗುರುವಿನಿಂದ ಅದನ್ನೇ ಕಲಿತೆ, ಮಗುವಿಗೂ ಅದನ್ನೇ ಬೋಧಿಸುವೆ' ಎಂದರು. ಚಿಕ್ಕ ಮಗುವಿದ್ದಾಗಿನಿಂದಲೂ ಜಾಕಿರ್‌ಗೆ ಸಂಗೀತವೇ ಎಲ್ಲವೂ ಆಗಿತ್ತು.